159

# ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರು ರವರು ನಿಯಮ 72ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

**ಪ್ರಶ್ನೆ:** ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲೂಕಿನ ಬೋಳಾಪುರ ಗ್ರಾಮದ ನಿವಾಸಿಯಾದ ಶ್ರೀ ಸಂದೇಶ್ ಶೆಟ್ಟಿ ಯವರ ಎರಡನೇ ಮಗಳಾದ ಶಮಿತಾ ಎಸ್ ಎಂಬ ಹೆಣ್ಣುಮಗು ಕೊಪ್ಪ ತಾಲೂಕಿನ ಹರಂದೂರಿನಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ 09 ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಾಗ ದಿನಾಂಕ 27-06-2025 ರಂದು ರಾತ್ರಿ ಸದರಿ ವಸತಿ ಶಾಲೆಯಲ್ಲಿ ಅನುಮಾನಾಸ್ಪದವಾಗಿ ನೇಣು ಬಿಗಿದ ಸ್ಥಿತಿಯಲ್ಲಿ ಮೃತ ಪಟ್ಟಿದ್ದು ಈ ಬಗ್ಗೆ, ಕೊಪ್ಪ ಪೊಲೀಸ್ ಠಾಣೆಯಲ್ಲಿ ಬಿ ಎನ್ ಎಸ್ ಕಾಯ್ದೆ ಪ್ರಕಾರ ಪ್ರಕರಣ ದಾಖಲಾಗಿರುತ್ತದೆ. ಸದರಿ ವಿದ್ಯಾರ್ಥಿನಿಯು ಶೈಕ್ಷಣಿಕ ಚಟುವಟಿಕೆಯಲ್ಲಿ ಉತ್ತಮವಾಗಿದ್ದು ವೈಯಕ್ತಿಕವಾಗಿ ಯಾವುದೇ ರೀತಿಯ ಸಮಸ್ಯೆಯನ್ನು ಹೊಂದಿಲ್ಲದ ಕಾರಣ ಮತ್ತು ಇದೇ ವಸತಿ ಶಾಲೆಯಲ್ಲಿ ಈ ಹಿಂದೆ ದಿ. 27-07-2023 ರಂದು ಅಮೂಲ್ಯ ಎಂಬ ಹೆಣ್ಣು ಮಗಳು ಕೂಡ ಇದೇ ರೀತಿ ಅನುಮಾನಾಸ್ಪದವಾಗಿ ಸಾವಿಗೀಡಾಗಿದ್ದು ಈ ಎರಡು ಅನುಮಾನಾಸ್ಪದ ಸಾವಿನ ತನಿಖೆಯನ್ನು ಪಾರದರ್ಶಕವಾಗಿ ನಡೆಸುವಂತೆ ಹೆತ್ತವರು ಮತ್ತು ಸದರಿ ತಾಲೂಕಿನ ಸಾರ್ವಜನಿಕರು ಆಗ್ರಹಿಸುತ್ತಿರುವುದರಿಂದ ಸದರಿ ಪ್ರಕರಣವನ್ನು ಸಮಗ್ರವಾಗಿ ವಿಚಾರಣೆ ನಡೆಸುವಂತೆ ಕೋರಿರುವ ಕುರಿತು.

**ಉತ್ತರ:** **1)** ಚಿಕ್ಕಮಗಳೂರು ಜಿಲ್ಲೆ, ಕೊಪ್ಪ ತಾಲ್ಲೂಕು, ಹರಂದೂರು ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಕು. ಶಮಿತಾ ಎಸ್ ಬಿನ್ ಸಂದೇಶ.ಎನ್ ಶೆಟ್ಟಿ ಎಂಬ ವಿದ್ಯಾರ್ಥಿನಿಯು ದಿನಾಂಕ: 29.06.2025 ರಂದು ವಸತಿ ಶಾಲೆಯ ನಿಲಯದ ಶೌಚಗೃಹದಲ್ಲಿ ವೇಲ್‌ನಿಂದ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ. ಮೃತ ವಿದ್ಯಾರ್ಥಿನಿಯ ತಂದೆಯು ಮಗಳ ಸಾವಿನ ಬಗ್ಗೆ ಅನುಮಾನವಿರುವುದಾಗಿ ನೀಡಿದ ದೂರಿನನ್ವಯ ಕೊಪ್ಪ ಪೊಲೀಸ್ ಠಾಣೆಯಲ್ಲಿ ಯು.ಡಿ.ಆರ್. ನಂ.12/2025 ಕಲಂ 194(3)(iv) ಬಿಎನ್‌ಎಸ್‌ಎಸ್ ರೀತ್ಯಾ ಪ್ರಕರಣ ದಾಖಲು ಮಾಡಿಕೊಂಡು ತನಿಖೆಯನ್ನು ಕೈಗೊಂಡಿದ್ದು, ದಿನಾಂಕ: 29.06.2025 ರಂದು SOCO (Scene of Crime Officers) ಅಧಿಕಾರಿಗಳ ತಜ್ಞರ ತಂಡದಿಂದ ಕೃತ್ಯ ನಡೆದ ಸ್ಥಳ ಪರಿಶೀಲನೆ ನಡೆಸಲಾಗಿರುತ್ತದೆ.

ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ Dept. of Forensic Medicine and Toxicology ವೈದ್ಯರಿಂದ ಶವದ ಮರಣೋತ್ತರ ಪರೀಕ್ಷೆಯನ್ನು ಮಾಡಿಸಲಾಗಿರುತ್ತದೆ. ಅದರಂತೆ ಪ್ರಕರಣಕ್ಕೆ ಸಂಬಂಧಪಟ್ಟ ಅರ್ಟಿಕಲ್ಸ್‌ಗಳನ್ನು ಸಂಗ್ರಹಿಸಿ ವಿಧಿವಿಜ್ಞಾನ ಪರೀಕ್ಷೆಗಾಗಿ ಎಫ್.ಎಸ್.ಎಲ್. ಬೆಂಗಳೂರು ಮತ್ತು ಆರ್.ಎಫ್.ಎಸ್.ಎಲ್. ಮಂಗಳೂರಿಗೆ ಕಳುಹಿಸಲಾಗಿರುತ್ತದೆ.

ಸದರಿ ಪ್ರಕರಣದ ವಿಚಾರಣೆಯನ್ನು ಸಿ.ಪಿ.ಐ., ಮೂಡಿಗೆರೆ ವೃತ್ತ, ಚಿಕ್ಕಮಗಳೂರು ಜಿಲ್ಲೆ ರವರು ಕೈಗೊಂಡಿದ್ದು, ಪ್ರಕರಣದ ತನಿಖೆಯನ್ನು ಸಮಗ್ರವಾಗಿ, ವೈಜ್ಞಾನಿಕ ರೀತಿಯಲ್ಲಿ, ಎಲ್ಲಾ ಆಯಾಮಗಳಲ್ಲಿ ನಡೆಸಿ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಹಾಗೂ ವಸತಿ ಶಾಲೆಯಲ್ಲಿದ್ದ ಮೊಬೈಲ್ ನಂಬರ್‌ಗಳ ಸಿ.ಡಿ.ಆರ್‌ನ್ನು, ವಸತಿ ಶಾಲೆಯ ಆವರಣ ಮತ್ತು ಕೊಠಡಿಯೊಳಗೆ ಅಳವಡಿಸಿದ್ದ ಸಿಸಿ ಟಿವಿ ಕ್ಯಾಮರಾಗಳ ದೃಶ್ಯಾವಳಿಗಳ ಪರಿಶೀಲನೆ ನಡೆಸಲಾಗಿದೆ.

ವಸತಿ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು, ವಸತಿ ನಿಲಯದ ವಿದ್ಯಾರ್ಥಿಗಳು ಮತ್ತು ಮೃತ ಬಾಲಕಿಯ ತಂದೆ ತಾಯಿ ಮತ್ತು ಸಂಬಂಧಿಕರ ಹೇಳಿಕೆಗಳನ್ನು ಪಡೆಯಲಾಗಿರುತ್ತದೆ.

ಪ್ರಕರಣದ ತನಿಖೆಯ ಪ್ರಗತಿಯ ಮಾಹಿತಿಯನ್ನು ಮೃತ ವಿದ್ಯಾರ್ಥಿನಿಯ ತಂದೆಯವರಿಗೆ ಕಾಲಕಾಲಕ್ಕೆ ನೀಡಲಾಗುತ್ತಿತ್ತು.

ಎಫ್.ಎಸ್.ಎಲ್ ಬೆಂಗಳೂರು ಮತ್ತು ಆರ್.ಎಫ್.ಎಸ್.ಎಲ್. ಮಂಗಳೂರಿನಿಂದ ಸ್ವೀಕೃತಗೊಂಡ ವರದಿಗಳ ಆಧಾರದ ಮೇರೆಗೆ ಶವ ಪರೀಕ್ಷೆ ನಡೆಸಿದ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯ ವೈದ್ಯರ ಅಂತಿಮ ಅಭಿಪ್ರಾಯ ವರದಿಯಲ್ಲಿ "On perusal of available documents, I am of the opinion that "Death was due to ASPHYXIA AS A RESULT OF HANGING" ಎಂಬುದಾಗಿ ಅಭಿಪ್ರಾಯ ನೀಡಿರುತ್ತಾರೆ. ತನಿಖಾಧಿಕಾರಿಯು ದಿನಾಂಕ:28.08.2025 ರಂದು ಕೊಪ್ಪ ತಾಲ್ಲೂಕು ದಂಡಾಧಿಕಾರಿಯವರಿಗೆ ಸಲ್ಲಿಸಿದ ಅಂತಿಮ ವರದಿಯು ದಿನಾಂಕ: 08.09.2025 ರಂದು ಅಂಗೀಕರಿಸಲ್ಪಟ್ಟಿರುತ್ತದೆ.

ಮೃತ ಬಾಲಕಿ ಕು. ಶಮಿತಾ, ತನ್ನ ಪುರುಷ ಸಹಪಾಠಿಗೆ ಬುಕ್ ಪಾಸ್ ಮಾಡಿದ ವಿಚಾರ ತರಗತಿಯ ಇತರೇ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ, ಪೋಷಕರಿಗೆ ಗೊತ್ತಾಗಿದ್ದರಿಂದ, ಬುಕ್ ಪಾಸ್ ಮಾಡಲು ಸರಿಯಾದ ಕಾರಣವನ್ನು ಯಾರೂ ತಿಳಿದು ಕೊಳ್ಳದೇ ಅವಳನ್ನು ಎಲ್ಲರೂ ಅಪಾರ್ಥ ಮಾಡಿಕೊಂಡರೆಂದು ಅವಳು ನೊಂದುಕೊಂಡು, ಈ ವಿಚಾರವಾಗಿ ಶಿಕ್ಷಕರಿಗೆ ಹಾಗೂ ತನ್ನ ಪೋಷಕರಿಗೆ ನನ್ನ ಮೇಲಿದ್ದ ಅಭಿಪ್ರಾಯ ಹಾಳಾಗಿರುತ್ತದೆ ಎಂದು ಮನನೊಂದು ಆತ್ಮಹತ್ಯೆ ಮಾಡಿಕೊಂಡಿರುವುದು ತನಿಖೆಯಿಂದ ತಿಳಿದು ಬಂದಿದೆ.

**2)** ದಿನಾಂಕ:27.07.2023ರಂದು ಬೆಳಗಿನ ಜಾವದ ಅವಧಿಯಲ್ಲಿ, 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಕು. ಅಮೂಲ್ಯ ಎಂಬ ವಿದ್ಯಾರ್ಥಿನಿಯು ಅದೇ ಶಾಲೆ ಸ್ನಾನಗೃಹದಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ. ಮೃತ ವಿದ್ಯಾರ್ಥಿನಿಯ ತಂದೆಯು ತನ್ನ ಮಗಳು ಯಾವುದೋ ಕಾರಣದಿಂದ ಹೆದರಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ ಎಂದು ನೀಡಿದ ದೂರಿನನ್ವಯ ಕೊಪ್ಪ ಪೊಲೀಸ್ ಠಾಣೆಯಲ್ಲಿ ಯು.ಡಿ.ಆರ್. ನಂ.15/2023 ಕಲಂ 174(ಸಿ) ಸಿ.ಆರ್.ಪಿ.ಸಿ ರಡಿ ಪ್ರಕರಣ ದಾಖಲು ಮಾಡಿಕೊಂಡು, ಪೊಲೀಸ್ ಠಾಣೆ ವತಿಯಿಂದ ತನಿಖೆ ಕೈಗೊಳ್ಳಲಾಗಿರುತ್ತದೆ. ಪ್ರಕರಣದ ತನಿಖೆಯನ್ನು ಸಮಗ್ರವಾಗಿ ಕೈಗೊಳ್ಳಲಾಗಿದ್ದು, ಮರಣೋತ್ತರ ಪರೀಕ್ಷೆ ನಡೆಸಿದ ವೈದ್ಯರು ಆರ್.ಎಫ್.ಎಸ್.ಎಲ್. ವರದಿಯನ್ನು ಆಧರಿಸಿ "I am of the opinion that The Cause of death is due to constricting force of ligature causing combined asphyxia and venous congestion due to Hanging" ಎಂಬುದಾಗಿ ಅಭಿಪ್ರಾಯ ನೀಡಿರುತ್ತಾರೆ. ವರದಿಯನ್ನು ನೀಡಿದ್ದು. ತನಿಖಾಧಿಕಾರಿಯು ದಿನಾಂಕ:28.10.2023 ರಂದು ಕೊಪ್ಪ ತಾಲ್ಲೂಕು ದಂಡಾಧಿಕಾರಿಯವರಿಗೆ ಸಲ್ಲಿಸಿದ ಅಂತಿಮ ವರದಿಯು ದಿನಾಂಕ: 22.04.2024 ರಂದು ಅಂಗೀಕರಿಸಲ್ಪಟ್ಟಿರುತ್ತದೆ.

ವಿದ್ಯಾರ್ಥಿನಿಯ ವರ್ತನೆಯನ್ನು ಗಮನಿಸಿ ಶಾಲೆಯ ಟೀಚರ್ ಕೌನ್ಸಿಲಿಂಗ್ ಮಾಡಿದಾಗ ನನಗೆ ದೇವರ ದೋಷವಿದೆ, ನನಗೆ ನಾಗರಹಾವು ಒಮ್ಮೆ ಮನೆಯಲ್ಲಿರುವಾಗ ಅಟ್ಟಿಸಿಕೊಂಡು ಬಂದಿರುತ್ತೆ ಎಂದಿದ್ದು ಹಾಗೂ ತನ್ನ ಸ್ನೇಹಿತರ ಹತ್ತಿರ ನನಗೆ ದೇವರಿಂದ ತೊಂದರೆ ಇದೆ ಏನಾದರೂ ಮಾಡಬೇಡ ಅಂದರೆ ನನಗೆ ಹಾಗೇ ಮಾಡಬೇಕು ಎಂದು ಅನಿಸುತ್ತದೆ ಎಂದು ಹೇಳಿಕೊಂಡಿರುತ್ತಾಳೆ ಎಂಬ ಅಂಶವನ್ನು ತನಿಖೆಯಲ್ಲಿ ಗುರುತಿಸಲಾಗಿರುತ್ತದೆ. ಆ ರೀತಿಯ ಭಯದಿಂದ ಮನನೊಂದು ವಿದ್ಯಾರ್ಥಿನಿಯು ಆತ್ಮಹತ್ಯೆ ಮಾಡಿಕೊಂಡಿರುವುದು ತನಿಖೆಯಿಂದ ಕಂಡುಬಂದಿರುತ್ತದೆ.

**ಸಂಖ್ಯೆ: ಹೆಚ್‌ಡಿ 120 ಪಿಸಿಕ್ಯೂ 2025**

**(ಡಾ: ಜಿ. ಪರಮೇಶ್ವರ)**
ಗೃಹ ಸಚಿವರು